## ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 790 (997)
ಸದಸ್ಯರ ಹೆಸರು : ಶ್ರೀ ಮಧು ಜಿ ಮಾದೇಗೌಡ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 14.03.2025
ಉತ್ತರಿಸುವ ಸಚಿವರು : ಸಮಾಜ ಕಲ್ಯಾಣ ಸಚಿವರು

| ಕ್ರ. ಸ. | ಪ್ರಶ್ನೆ | ಉತ್ತರ |
|---|---|---|
| ಅ) | ವಿವಿಧ ಇಲಾಖೆಗಳಲ್ಲಿ ಗ್ರೂಪ್-ಎ ಜೂನಿಯರ್ ಹುದ್ದೆಯಿಂದ ಗ್ರೂಪ್-ಎ ಸೀನಿಯರ್ ಹುದ್ದೆಗೆ ಅರ್ಹತಾದಾಯಕ ಸೇವೆ ಕನಿಷ್ಠ 3 ವರ್ಷಗಳನ್ನು ನಿಗದಿಪಡಿಸಿದ್ದು, ಸಮಾಜ ಕಲ್ಯಾಣ ಇಲಾಖೆಯಲ್ಲಿ ಇದುವರೆವಿಗೂ ವೃಂದ ಮತ್ತು ನೇಮಕಾತಿ ನಿಯಮದಲ್ಲಿ ತಿದ್ದುಪಡಿ ಆಗದಿರಲು ಕಾರಣಗಳೇನು: | ಸಮಾಜ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ಸಮಗ್ರ ತಿದ್ದುಪಡಿಯನ್ನು 2022ರಲ್ಲಿ ಸರ್ಕಾರದ ಅಧಿಸೂಚನೆ ಸಂಖ್ಯೆ:SWD 97 PKS 2022 ದಿನಾಂಕ:28-12-2022ರಲ್ಲಿ ಹೊರಡಿಸಲಾಗಿದೆ. ಸದರಿ ಅಧಿಸೂಚನೆಯಲ್ಲಿ ಗ್ರೂಪ್-ಎ, ಕಿರಿಯ ವೇತನ ಶ್ರೇಣಿ ಹುದ್ದೆಯಾದ ಸಹಾಯಕ ನಿರ್ದೇಶಕರು ಗ್ರೇಡ್-1, ಹುದ್ದೆಯಿಂದ ಗ್ರೂಪ್-ಎ, ಹಿರಿಯ ವೇತನ ಶ್ರೇಣಿ ಹುದ್ದೆಯಾದ ಉಪ ನಿರ್ದೇಶಕರ ಹುದ್ದೆಗೆ 05 ವರ್ಷಗಳ ಆರ್ಹತಾದಾಯಕ ಸೇವೆಯನ್ನು ನಿಗಧಿ ಪಡಿಸಲಾಗಿದೆ. |
| ಆ) | ಸಮಾಜ ಕಲ್ಯಾಣ ಇಲಾಖೆಯಲ್ಲಿ ಗ್ರೂಪ್-ಎ ಜೂನಿಯರ್ ಹುದ್ದೆಯಾದ ಸಹಾಯಕ ನಿರ್ದೇಶಕರು ಗ್ರೇಡ್-1 ಹುದ್ದೆಯಿಂದ ಗ್ರೂಪ್-ಎ ಸೀನಿಯರ್ ಹುದ್ದೆಯಾದ ಉಪ ನಿರ್ದೇಶಕರ ಹುದ್ದೆಗೆ ಮುಂಬಡ್ತಿ ಹೊಂದಲು ನಿಗದಿಪಡಿಸಿರುವ ಅರ್ಹತಾದಾಯಕ ಸೇವೆ ಎಷ್ಟು ಹಾಗೂ ಇದರಿಂದ ಹಲವು ನೌಕರರಿಗೆ ಮುಂಬಡ್ತಿ ಹೊಂದಲು ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: | ಹಾಲಿ ಚಾಲ್ತಿಯಲ್ಲಿರುವ ವೃಂದ ಮತ್ತು ನೇಮಕಾತಿ ನಿಯಮಗಳು 2022 ರನ್ವಯ ಸಹಾಯಕ ನಿರ್ದೇಶಕರು ಗ್ರೇಡ್-1 ಹುದ್ದೆಯಿಂದ ಉಪ ನಿರ್ದೇಶಕರ ಹುದ್ದೆಗೆ 05 ವರ್ಷಗಳ ಅರ್ಹದಾಯಕ ಸೇವೆ ನಿಗದಿಪಡಿಸಲಾಗಿದೆ. ಅದರಂತೆ ಆರ್ಹತದಾಯಕ ಸೇವೆ ಪೂರೈಸಿರುವ ಅರ್ಹ ಅಧಿಕಾರಿಗಳಿಗೆ ಚಾಲ್ತಿಯಲ್ಲಿರುವ ಸಿ & ಆರ್ ನಿಯಮಗಳನ್ವಯ ಖಾಲಿ ಹುದ್ದೆಗಳಿಗೆ ನಿಯತವಾಗಿ ಮುಂಬಡ್ತಿ ನೀಡಲಾಗುತ್ತಿದೆ. |
| ಇ) | ದಿನಾಂಕ:**10.07.2024**ರಂದು ಪ್ರಧಾನ ಕಾರ್ಯದರ್ಶಿಗಳ ಅಧ್ಯಕ್ಷತೆಯಲ್ಲಿ ನಡೆದ ವೃಂದ ಮತ್ತು ನೇಮಕಾತಿಯ ಉಪ ಸಮಿತಿ | ಸರ್ಕಾರದ ಸುತ್ತೋಲೆ ಸಂಖ್ಯೆ:ಸಿಆಸುಇ 97 ಸೇನಿಡಿ 2018 ದಿನಾಂಕ:12-06-2018ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳ ರಚನೆ ಮತ್ತು ತಿದ್ದುಪಡಿ ಕೈಗೊಳ್ಳಲು ಅನುಸರಿಸಬೇಕಾದ |

| | | |
|---|---|---|
| | ಸಭೆಯಲ್ಲಿ ಅರ್ಹತಾ ಸೇವೆಯನ್ನು 3 ವರ್ಷಗಳಿಗೆ ನಿಗದಿಪಡಿಸಲು ತೀರ್ಮಾನಿಸ ಲಾಗಿತ್ತು: ಇದುವರೆವಿಗೂ ತಿದ್ದುಪಡಿ ಆಗದಿರಲು ಕಾರಣಗಳೇನು: | ಕ್ರಮಗಳ ಕುರಿತು ವಿವರಿಸಿದ್ದು, ಅದರಂತೆ ವೃಂದ ಮತ್ತು ನೇಮಕಾತಿ ನಿಯಮ-2022ರಲ್ಲಿ ಮುಂಬಡ್ತಿಗೆ ನಿಗದಿ ಪಡಿಸಲಾದ ಕನಿಷ್ಟ ಅರ್ಹತಾದಾಯಕ ಸೇವಾ ಅವಧಿ 05 ವರ್ಷಗಳ ಬದಲಿಗೆ 03 ವರ್ಷ ಸೇವೆ ಸಲ್ಲಿಸಿದ ಅಧಿಕಾರಿ/ನೌಕರನ್ನು ಮುಂಬಡ್ತಿಗೆ ಪರಿಗಣಿಸುವ ಕುರಿತು ವೃಂದ ಮತ್ತು ನೇಮಕಾತಿ ನಿಯಮ-2022ಕ್ಕೆ ತಿದ್ದುಪಡಿ ಕೈಗೊಳ್ಳಲು ಕಡತವು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಪರಿಶೀಲನೆಯಲ್ಲಿರುತ್ತದೆ. |
| ಈ) | ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ, ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆ ಮತ್ತು ಆರ್ಥಿಕ ಇಲಾಖೆಯವರು ಒಮ್ಮತ ಅಭಿಪ್ರಾಯ ನೀಡಿದ್ದರೂ ಸಹ ಮತ್ತೊಮ್ಮೆ ಕಡತವನ್ನು ಸದರಿ ಇಲಾಖೆಗಳ ಅಭಿಪ್ರಾಯಕ್ಕೆ ಕಳುಹಿಸುವ ಅವಶ್ಯಕತೆ ಇದೆಯೇ: | |
| ಉ) | ಸಮಾಜ ಕಲ್ಯಾಣ ಇಲಾಖೆಯ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ತರಲು ವಿಳಂಬ ಮಾಡುತ್ತಿರುವುದು ಏಕೆ? | |

ಸಕಇ/226/ಪಕವಿ/2025

(ಡಾ. ಹೆಚ್.ಸಿ. ಮಹದೇವಪ್ಪ)
ಸಮಾಜ ಕಲ್ಯಾಣ ಸಚಿವರು